

ಮಂಜುನಾಥ್ ಹುಲಕೊಡ್ಡ

# ಗಿಳಿರಾಮ ಮತ್ತು ಬಡ ವ್ಯಾಪಾರಿ

ಒಂದು ಹಳ್ಳಿಯಲ್ಲಿ ಒಬ್ಬ ವ್ಯಾಪಾರಿಯಿದ್ದ. ಅವನು ಬೆಟ್ಟದಿಂದ ಹಣ್ಣುಗಳನ್ನು ಕಿತ್ತು ತಂದು ಅದನ್ನು ಚೆನ್ನಾಗಿ ತೊಳೆದು ವ್ಯಾಪಾರ ಮಾಡುತ್ತಿದ್ದ. ಒಮ್ಮೆ ಹಣ್ಣುಗಳನ್ನು ತರಲು ಹೋದಾಗ ವಿಲ ವಿಲ ಒದ್ದಾಡುವ ಗಿಳಿಯನ್ನು ನೋಡಿದ. ಆ ಗಿಳಿ ಯಾವುದೋ ಕ್ರೂರ ಪ್ರಾಣಿಯ ಬಾಯಿಯಿಂದ ತಪ್ಪಿಸಿಕೊಂಡು ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿತ್ತು. ವ್ಯಾಪಾರಿ ಅದನ್ನು ನೋಡಿ ಅಯ್ಯೊ ಪಾಪ! ಎಂದು ಅದನ್ನು ಹತ್ತಿರದ ಕೊಳಕ್ಕೆ ತಗೆದುಕೊಂಡು ಹೋಗಿ ನೀರನ್ನು ಕುಡಿಸಿ, ಹಣ್ಣನ್ನು ತಿನ್ನಿಸಿ ತನ್ನ ಮನೆಗೆ ತಂದು ಸಾಕಿದ. ಅದು ಕ್ರಮೇಣ ಚೇತರಿಸಿಕೊಂಡು ಬಡವ್ಯಾಪಾರಿಯ ಮನೆಯ ಸದಸ್ಯನಂತೆ ಇರತೊಡಗಿತು.

ದಿನವೂ ವ್ಯಾಪಾರಿಯ ಹೆಗಲ ಮೇಲೇರಿ ತಾನೂ ಪೇಟೆಯೆಲ್ಲಾ ಸುತ್ತತೊಡಗಿತು. ಖುಷಿಯಿಂದ ತನ್ನದೇ ಭಾಷೆಯಲ್ಲಿ ಮಾತನಾಡುತ್ತ ಹಾರುತ್ತ ಕುಣಿಯುತಿತ್ತು. ವ್ಯಾಪಾರಿ ಪ್ರೀತಿಯಿಂದ ಗಿಳಿಯನ್ನು 'ಗಿಳಿರಾಮ' ಎಂದು ಹೆಸರಿಟ್ಟ. ಹೀಗಿರುವಾಗ ಒಂದು ದಿನ ವ್ಯಾಪಾರಿಯು ಪೇಟೆಗೆ ಹಣ್ಣುಗಳನ್ನು ಮಾರಲು ಹೊರಟಾಗ ಅದೇ ಪೇಟೆಗೆ ಆ ಹಳ್ಳಿಯ ಶ್ರೀಮಂತನ ಮಗಳು ಗಿಳಿರಾಮನ ನೋಡಿ ಅಪ್ಪಾಜಿ! ಅಪ್ಪಾಜಿ! ನನಗೆ ಆ ಗಿಳಿಯನ್ನು ಕೊಡಿಸು. ಎಷ್ಟು ಮುದ್ದಾಗಿದೆ ತುಂಬಾ ಚುರುಕಾಗಿದೆ. ಆ ಗಿಳಿಯ ಜೊತೆ ಆಡಲು ಆಸೆ ಎಂದು ಹಟ ಮಾಡತೊಡಗಿದಳು. ಅದರಿಂದ ಶ್ರೀಮಂತ ವ್ಯಕ್ತಿ ಗರ್ವದಿಂದ ಅರೆ... ಎಂದೂ ಏನನ್ನು ಕೇಳದ ನನ್ನ ಮಗಳು ಇಂದು ಆ ಚಿಕ್ಕ ಗಿಳಿಯನ್ನು ಕೇಳಿದರೆ ಇಲ್ಲ ಎನ್ನಲಾದಿತೆ? ಎಂದು ಬಡವ್ಯಾಪಾರಿಯ ಬಳಿ ಹೋಗಿ ನಿನ್ನ ಬಳಿ ಇರುವ ಆ ಗಿಳಿಯನ್ನು ನನ್ನ ಮಗಳು ಬಯಸಿದ್ದಾಳೆ ದಯವಿಟ್ಟು ಆ ಗಿಳಿಯನ್ನು ನನ್ನ ಮಗಳಿಗೆ ಕೊಟ್ಟು ಬಿಡು ನಿನಗೆ ಎಷ್ಟು ದುಡ್ಡು ಬೇಕಾದರೂ ಕೊಡುವೆ ಎನ್ನುತ್ತಾನೆ. ಇದರಿಂದ ವ್ಯಾಪಾರಿಯ ಮುಖ ಬಾಡಿಹೋಗುತ್ತದೆ. ಇಲ್ಲ ಇವನು ನನ್ನ ಆಪ್ತ ಗೆಳೆಯನ ರೀತಿ, ನನ್ನ ಅಚ್ಚುಮೆಚ್ಚಿನ ಗಿಳಿರಾಮ ನನ್ನಿಂದ ಕೊಡಲಾಗುವುದಿಲ್ಲ ದಯವಿಟ್ಟು ಕ್ಷಮಿಸಿ ಒಡೆಯ ಎಂದು ಮನೆಗೆ ಹೋಗುತ್ತಾನೆ.

ಇದರಿಂದ ತುಂಬ ಬೇಸರಗೊಂಡ ಮಗಳನ್ನು ಎಷ್ಟು ಸಮಾಧಾನ ಮಾಡಿದರೂ ಪ್ರಯೋಜನವಾಗಲಿಲ್ಲ. ಶ್ರೀಮಂತ ವ್ಯಕ್ತಿಯು ಅವನ ಮಗಳೂ ಇಬ್ಬರೂ ಮನೆಗೆ ಹಿಂದುರಿಗಿದರು. ಮನೆಗೆ ಬಂದ ನಂತರವೂ ಆ ಮಗಳು ಊಟ ನಿದ್ರೆ ಬಿಟ್ಟು ನಿದ್ರೆಯಲ್ಲೂ ಗಿಳಿರಾಮ ಎಂದು ಕನವರಿಸತೊಡಗಿದಳು. ಇದರಿಂದ ಗಾಬರಿಗೊಂಡ ಶ್ರೀಮಂತ ಮತ್ತು ಅವನ ಹೆಂಡತಿ ಮಾರನೇ ದಿನ ಮತ್ತೆ ಪುನಃ ಬಡವ್ಯಾಪಾರಿಯ ಮನೆಯ ಹತ್ತಿರ ಹೋಗಿ ಬಿಕ್ಕಿ ಬಿಕ್ಕಿ ಅಳುತ್ತಾರೆ. ದಯವಿಟ್ಟು ಗಿಳಿರಾಮನನ್ನು ಕೊಟ್ಟು ನನ್ನ ಮಗಳ ಆರೋಗ್ಯ ಕಾಪಾಡಿ ಎಂದು ಇದ್ದ ವಿಷಯವನ್ನೆಲ್ಲಾ ಹೇಳುತ್ತಾರೆ. ಇನ್ನೊಬ್ಬರಿಗೆ ಸ್ವಲ್ಪವೂ ನೋಯಿಸದ ವ್ಯಾಪಾರಿ ಗಿಳಿರಾಮನ ಬಳಿ ಹೋಗಿ ದಯವಿಟ್ಟು ಅವರ ಮನೆಗೆ ಹೋಗು,ನಿನ್ನನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಾರೆ. ಪ್ರೀತಿಯಿಂದ ಸಾಕುತ್ತಾರೆ ಎಂದು ಹೇಳುವಾಗ ವ್ಯಾಪಾರಿಯ ಕಣ್ಣು ತುಂಬಿಕೊಳ್ಳುತ್ತದೆ. ಗಿಳಿರಾಮನೂ ಸಹ ತುಂಬಾ ಬೇಸರದಿಂದ ತನ್ನ ಸಾಕಿದ ಪ್ರೀತಿಯಿಂದ ಸಲುಹಿದ ವ್ಯಾಪಾರಿಯ ಮಾತಿಗೆ ಇಲ್ಲವೆನ್ನದೆ ಶ್ರೀಮಂತ ವ್ಯಕ್ತಿಯ ಜೊತೆಗೆ ಹೋಗುತ್ತದೆ.

ಶ್ರೀಮಂತ ವ್ಯಕ್ತಿಯ ಮನೆಯ ಬಳಿ ಹೋಗುತಿದ್ದಂತೆ ಬಾಗಿಲಲ್ಲಿ ನಿಂತ ಮಗಳು ಅಪ್ಪನ ಹೆಗಲಲಿ ಕುಳಿತ ಗಿಳಿರಾಮನ ನೋಡಿ ಕುಣಿದು ಕುಪ್ಪಳಿಸುತ್ತಾಳೆ.ಗಿಳಿರಾಮನನ್ನು ತನ್ನ ಮೈಮೇಲೆ ಕುಳಿಸಿಕೊಂಡು ಮನೆಯ ತುಂಬಾ ಓಡಾಡುತ್ತಾಳೆ. ಗಿಳಿರಾಮನಿಗೆ ಹಣ್ಣು ಹಂಪಲು ಕೊಟ್ಟು ಉಪಚರಿಸಿ, ಸ್ನಾನಮಾಡಿಸಿ ಅಲಂಕಾರವನ್ನು ಮಾಡುತ್ತಾಳೆ. ಅವಳ ಆನಂದಕ್ಕೆ ಪಾರವೇ ಇಲ್ಲ. ಹೀಗೆ ಇರುವಾಗ ಒಂದುದಿನ ಕಿಟಕಿಯ ಹೊರಗೆ ಹಣ್ಣು ಮಾರಲು ಹೋಗುತ್ತಿರುವ ಬಡವ್ಯಾಪಾರಿಯ ನೋಡಿ ಗಿಳಿರಾಮನು ಪುರ್ರ್ ಪುರ್ರ್ ಎಂದು ಹಾರಿ ಹೋಗಿ ವ್ಯಾಪಾರಿ ಹೆಗಲ ಮೇಲೆ ಕುಳಿತುಕೊಳ್ಳುತ್ತದೆ. ಹಾಗೆ ಗಿಳಿರಾಮನ ಕಣ್ಣೀರು ಉದುರಿ ವ್ಯಾಪಾರಿಯ ಕೈಮೇಲೆ ಬೀಳುತ್ತದೆ. ದಿನಾಲೂ ವ್ಯಾಪಾರಿಯ ಜೊತೆಗೆ ಪರಿಸರ ವೀಕ್ಷಿಸುತ್ತಾ ಸ್ವತಂತ್ರವಾಗಿ ಇದ್ದ ಹಕ್ಕಿಯನ್ನು ಶ್ರೀಮಂತರ ಮನೆಯ ಒಳಗೆ ಕೂಡಿಟ್ಟ ಅನುಭವ ಬಡವ್ಯಾಪಾರಿಗೆ ತಿಳಿದು ಬೇಸರವಾಗಿತ್ತದೆ.

ಅಷ್ಟರೊಳಗೆ ಮನೆಯ ಒಳಗಿಂದ ಗಿಳಿರಾಮನನ್ನು ನೋಡಿದ ಮಗಳು ಓಡೋಡಿ ಬಂದು ಗಿಳಿರಾಮನನ್ನು ಕಸಿದುಕೊಂಡು, ಬಡವ್ಯಾಪಾರಿಯ ಬಳಿ ನೀನು ಇನ್ನು ಯಾವತ್ತೂ ಈ ದಾರಿಯಲ್ಲಿ ಬರಬೇಡ. ನನ್ನ ಗಿಳಿರಾಮನನ್ನು ನನ್ನಿಂದ ದೂರ ಮಾಡಬೇಡ ಎಂದು ಕೂಗಿ ಮನೆಯ ಒಳಗೆ ಕರೆದುಕೊಂಡು ಹೋಗುತ್ತಾಳೆ. ವ್ಯಾಪಾರಿಯು ಅಳುತ್ತಾ ಮನೆಗೆ ಹಿಂದಿರುಗುತ್ತಾನೆ. ಒಳಗೆ ಬಂದ ಮಗಳು ಒಂದಲ್ಲ ಒಂದುದಿನ ನನ್ನ ಕಣ್ಣು ತಪ್ಪಿಸಿಕೊಂಡು ಹೋಗಬಹುದು ಗಿಳಿರಾಮು ಎಂದು ಕೆಟ್ಟ ಯೋಚನೆ ಮಾಡುತ್ತಾ ಗಿಳಿಯನ್ನು ಪಂಜರದೊಳಗೆ ಕೂಡಿ ಹಾಕುತ್ತಾಳೆ. ಇದರಿಂದ ಗಿಳಿರಾಮನು ದಿನದಿಂದ ದಿನಕ್ಕೆ ಅಳುತ್ತಾ ಇದ್ದ ಸ್ವಾತಂತ್ರ್ಯವನ್ನೆಲ್ಲಾ ಕಳೆದುಕೊಂಡು ಕೊರಗುತ್ತಾ ತನ್ನ ಪ್ರಾಣವನ್ನು ಕಳೆದುಕೊಳ್ಳುತ್ತದೆ.

ಸತ್ತ ಗಿಳಿರಾಮನನ್ನು ನೋಡಿದ ಮಗಳು ಅಯ್ಯೋ ದೇವರೆ ನನ್ನ ಅತಿ ಆಸೆ ಅತಿ ಪ್ರೀತಿ ನನ್ನ ಕೆಟ್ಟ ಹಟದಿಂದ ಗಿಳಿರಾಮನನ್ನು ನಾನೇ ಸಾಯಿಸಿದಂತಾಯಿತು. ಛೆ! ಹಾರಾಡುತ್ತ ನಲಿಯುತ್ತ ಇದ್ದ ಮೂಕಗಿಳಿಯನ್ನು ನಾನು ಕೂಡಿಹಾಕಬಾರದಿತ್ತು ಎಂದು ಅಳುತ್ತಾ ತಾನೂ ಸಹ ಪ್ರಜ್ಞೆಯನ್ನು ಕಳೆದುಕೊಳ್ಳುತ್ತಾಳೆ. ಇತ್ತ ಶ್ರೀಮಂತ ವ್ಯಕ್ತಿ ಮತ್ತು ಅವನ ಹೆಂಡತಿ ಅಯ್ಯೋ ದೇವರೆ ಮಕ್ಕಳ ಇಷ್ಟಕ್ಕೆ, ಪ್ರಾಣಿ ಪಕ್ಷಿಗಳ ಬಲಿ ಪಡೆದುಕೊಳ್ಳಬಾರದು ಎಂಬ ಅರಿವು ನಮಗೆ ಇಲ್ಲವಾದಿತು.ಯಾವುದು ಸರಿ, ಯಾವುದು ತಪ್ಪು ಎಂಬ ಸಾಮಾನ್ಯ ಜ್ಞಾನವನ್ನು ಮಕ್ಕಳಿಗೆ ತಿಳಿಹೇಳಲಾಗಲಿಲ್ಲ ಎಂದು ಕೊರಗುತ್ತಾರೆ.

ನೀತಿ: ಕಳೆದ ಸಮಯ ಸತ್ತ ಜೀವ ಮತ್ತೆ ತರಲಾದಿತೆ?

■ ಅಂಬುಜ ಗಣೇಶ್